ಆ) ಹಾಗಿದ್ದಲ್ಲಿ ಇವರುಗಳಲ್ಲಿ ಅಮಾಯಕ ವಿದ್ಯಾರ್ಥಿಗಳು ಸೇರಿರುವುದು ನಿಜವೇ;

ಅನ್ವಯಿಸುವುದಿಲ್ಲ.

ಇ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರ ಉದ್ದೇಶಿಸಿದೆಯೇ?

ಅನ್ವಯಿಸುವುದಿಲ್ಲ.

ಸಂ:ಒಇ 09 ಸದನ 2009

ಸಹಿ/-
ಡಾ:ವಿ.ಎಸ್. ಆಚಾರ್ಯ
ಗೃಹ ಸಚಿವರು

(ಪಿ ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.(ಅಪರಾಧಗಳು)

580 ಶ್ರೀ ಖಾದರ್ ಯು.ಟಿ
ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು
ಪ್ರವಾಸೋದ್ಯಮ ಸ್ಥಳಗಳ ಗುರುತಿಸುವಿಕೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಅಭಿವೃದ್ಧಿ ಪಡಿಸಲು ಗುರುತಿಸಲು ಸ್ಥಳಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು);

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಮಂಗಳೂರು ತಾಲ್ಲೂಕು:

1. ಪಣಂಬೂರು
2. ಪಿಲಿಕುಲ ನಿಸರ್ಗಧಾಮ (ಮುಡುಶೆಡ್ಡೆ)
3. ತಣ್ಣೀರುಭಾವಿ
4. ಉಲ್ಲಾಳ

ಬಂಟವಾಳ ತಾಲ್ಲೂಕು:

1. ವಗ್ಗಾ ಗ್ರಾಮದ ಕಾರಂಜೇಶ್ವರ ದೇವಾಲಯ.

The following tourism places have been identified for development in Dakshina Kannada District.

Mangalore Taluk:

1. Panambur
2. Pilikula (Mudushedde)

3. Tannirubhavi
4. Ullal

Bantavala Taluk:

Vagga-Karanjeshwara Temple.

ಆ) ಇದಕ್ಕಾಗಿ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣವೆಷ್ಟು?

1. ಪಣಂಬೂರು ಬೀಚ್‌ನಲ್ಲಿ ರೂ.24.75ಲಕ್ಷಗಳ ವೆಚ್ಚದಲ್ಲಿ ಹೈಟೆಕ್ ಮಾದರಿಯ ಶೌಚಾಲಯ ಮತ್ತು ಕುಡಿಯುವ ನೀರು ಸೌಲಭ್ಯ ಹಾಗೂ ಉಪಹಾರ ಗೃಹಗಳನ್ನು ನಿರ್ಮಿಸಲಾಗಿದೆ. ಸದರಿ ಬೀಚ್ ಪ್ರದೇಶದಲ್ಲಿ ರೂ.39.66ಲಕ್ಷಗಳ ವೆಚ್ಚದಲ್ಲಿ ಹೊನಲು ಬೆಳಕು ಯೋಜನೆಯನ್ನು ಅಳವಡಿಸಲಾಗಿದೆ.

2. ಪಣಂಬೂರು ಬೀಚ್‌ನಲ್ಲಿ ವಾಹನ ನಿಲ್ದಾಣ ಹಾಗೂ ತೂಗುಸೇತುವೆ ಅಭಿವೃದ್ಧಿಗಾಗಿ ರೂ.51.03ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

3. ಪಿಲಿಕುಲ ನಿಸರ್ಗಧಾಮದಲ್ಲಿ ವನ್ಯಜೀವಿ ವಿಭಾಗ ಅಭಿವೃದ್ಧಿಗಾಗಿ ರೂ.55.00ಲಕ್ಷಗಳನ್ನು ಹಾಗೂ ಕಂಬಳ ಕ್ರೀಡೆ ಅಭಿವೃದ್ಧಿಗಾಗಿ ರೂ.62.00ಲಕ್ಷಗಳನ್ನು ಮತ್ತು ಸಂಸ್ಕೃತಿ ಗ್ರಾಮ ಅಭಿವೃದ್ಧಿಗಾಗಿ ರೂ.275.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಮಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

4. ತಣ್ಣೀರುಭಾವಿ ಬಳಿ ಗುರುತಿಸಿರುವ 125 ಎಕರೆ ಜಮೀನನ್ನು ಪ್ರವಾಸೋದ್ಯಮ ಇಲಾಖೆಗೆ ವರ್ಗಾಯಿಸಿಕೊಂಡು ಪಿ.ಪಿ.ಪಿ ಯೋಜನೆಯಡಿ ಅಕ್ವಾಮೆರೀನ್ ಪಾರ್ಕ್ ಹಾಗೂ ಗಾಲ್ಫ್ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ ಖಾಸಗಿ ಡೆವಲಪರ್ ಆಯ್ಕೆ ಮಾಡಲು ಹಾಗೂ ಅಧ್ಯಯನ ವರದಿಗಳನ್ನು ತಯಾರಿಸಲು ರೂ.97.00ಲಕ್ಷಗಳನ್ನು ನೋಡಲ್ ಸಂಸ್ಥೆಯಾದ ಕೆ.ಎಸ್.ಐ.ಐ.ಡಿ.ಸಿ ಗೆ ಬಿಡುಗಡೆ ಮಾಡಲಾಗಿದೆ.

5. ಉಲ್ಲಾಳ ಬೀಚ್ ಅಭಿವೃದ್ಧಿಪಡಿಸಲು ಮೊದಲ ಕಂತಾಗಿ ರೂ.22.50ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

6. ದಕ್ಷಿಣ ಕನ್ನಡ ಬಂಟವಾಳ ತಾಲ್ಲೂಕಿನ ವಗ್ಗಾ ಗ್ರಾಮದಲ್ಲಿರುವ ಕಾರಂಜೇಶ್ವರ ದೇವಾಲಯದ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

581 ಶ್ರೀ ಯು.ಟಿ ಖಾದರ್ (ಮಂಗಳೂರು)

ಮಾನ್ಯ ಗೃಹ ಸಚಿವರು

ಅ) ರಾಜ್ಯದಲ್ಲಿ ಕೋಮುವಾದಿ ಹಾಗೂ ಮತೀಯ ಶಕ್ತಿಗಳನ್ನು ನಿಯಂತ್ರಿಸಲು ಸರ್ಕಾರ ಯಾವುದಾದರೂ ಕಾನೂನು ಜಾರಿಗೊಳಿಸುವುದೇ?

ರಾಜ್ಯದಲ್ಲಿ ಕೋಮುವಾದಿ ಹಾಗೂ ಮತೀಯ ಶಕ್ತಿಗಳನ್ನು ನಿಯಂತ್ರಿಸಲು ಸರ್ಕಾರ ಬೇರೆ ಯಾವುದಾದರೂ ಕಾನೂನು ಜಾರಿಗೊಳಿಸುವ ಅವಶ್ಯಕತೆ